1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.68/2017

ದಿಃ 08.10.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-17 Pw-8

| | | |
|---|---|---|
| ಹೆಸರು | ಃ | ಮೊಹಮ್ಮದ್ ಬರ್ಕತ್ |
| ಗಂಡನ ಹೆಸರು | ಃ | ಮೊಹಮ್ಮದ್ ರಿಯಾಜ್ ಉಲ್ಲಾ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ಆಟೋ ಚಾಲಕ |
| ವಾಸಸ್ಥಳ | ಃ | ಮಾಗಡಿ ಟೌನ್ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿದಾರರು ನಿ.ಪಿ.10 ಜಪ್ತಿ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.10(ಬಿ) ಎಂದು ಗುರುತಿಸಲಾಯಿತು. ಈ ಸಹಿಯನ್ನು ದಿಃ08.03.2017ರಂದು ಮಧ್ಯಾಹ್ನದ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಪಡೆದಿರುತ್ತಾರೆ. ಚಾಸಾ.16 ನನ್ನ ಅತ್ತೆ ಠಾಣೆಯಲ್ಲಿ ನೀಡಿದ್ದರೆಂದು ಹೇಳಲಾದ ವಸ್ತುಗಳನ್ನು ಪೊಲೀಸರು ನಮಗೆ ತೋರಿಸಿ ಬರೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆ ಮಾಲು 9ರಿಂದ 12 ಗಳನ್ನು ಸಾಕ್ಷಿಗೆ ತೋರಿಸಿ ಗುರುತಿಸಿರುತ್ತಾರೆ. ನಾವು ಮನೆಯಿಂದ

ಕವರಿನಲ್ಲಿ ಸದರಿ ವಸ್ತುಗಳನ್ನು ಪೊಲೀಸರಿಗೆ ನೀಡಿರುತ್ತೇವೆ. ಮುದ್ದೆ ಮಾಲು 12ನ್ನು ಸಾಕ್ಷಿ ಈ ಹಿಂದೆ ನೋಡಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಮುದ್ದೆ ಮಾಲು 12ರಲ್ಲಿಯೇ ಚಾಸಾ.16ರವರು ಮುದ್ದೆ ಮಾಲು 9ರಿಂದ 11ಗಳನ್ನು ಆರೋಪಿಗಳು ಹಾಕಿದ್ದನ್ನು ತಂದು ಪೊಲೀಸ್ ಠಾಣೆಯಲ್ಲಿ ನೀಡಿದ್ದು, ಮುದ್ದೆ ಮಾಲು 12ನ್ನೂ ಸಹ ಜಪ್ತಿ ಮಾಡಲಾಯಿತು ಎಂದರೆ ಸಾಕ್ಷಿ ಮುದ್ದೆ ಮಾಲು 12 ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಶ್ರೀ. ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಕಲಂ 231(2)ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.